# ಬಳ್ಳಾರಿಯಲ್ಲಿ ಜ್ಞಾನವಾಹಿನಿ ಕಾರ್ಯಕ್ರಮಕ್ಕೆ ಭವ್ಯ ಸ್ವಾಗತ

ಮೈಸೂರಿನ ಶ್ರೀರಾಮಕೃಷ್ಣ ಆಶ್ರಮದ ಒಂದು ವಿನೂತನ ಮಹಾನ್ ಪ್ರಯೋಗವಾದ "ಜ್ಞಾನವಾಹಿನಿ" ಸಂಚಾರಿ ಜ್ಞಾನ ಪ್ರಸಾರ ಅಭಿಯಾನಕ್ಕೆ ಬಳ್ಳಾರಿಯಲ್ಲಿ ಭವ್ಯ ಸ್ವಾಗತ ನೀಡಲಾಯಿತು.



ಸ್ವಾಮಿ ವಿವೇಕಾನಂದರ ಪ್ರತಿಮೆಗೆ ಮಾಲಾರ್ಪಣ ಮಾಡುತ್ತಿರುವ ಸ್ವಾಮಿ ಆತ್ಮವಿದಾನಂದಜಿ ಅವರು.

ಕಳೆದ ಅಕ್ಟೋಬರ್‌ನಲ್ಲಿ ಪ್ರಾರಂಭವಾಗಿ ಈಗಾಗಲೇ ಕರ್ನಾಟಕದ ಐದು ಜಿಲ್ಲೆಗಳಲ್ಲಿ ಜ್ಞಾನಪ್ರಸಾರ ವಿಜಯೋತ್ಸವವನ್ನು ಮುಗಿಸಿ ಬಳ್ಳಾರಿ ನಗರದಲ್ಲಿ ಫೆ.೧೧ರಿಂದ ೧೩ರವರೆಗೆ ಜ್ಞಾನವಾಹಿನಿ ಕಾರ್ಯಕ್ರಮವನ್ನು ಮೂರು ದಿನಗಳ ಕಾಲ ಹಮ್ಮಿಕೊಂಡು ಜಿಲ್ಲೆಯ ಜನತೆಗೆ ಜ್ಞಾನ ದಾಸೋಹವನ್ನು ನೆರವೇರಿಸಲಾಯಿತು. ಮೈಸೂರಿನ ಶ್ರೀರಾಮಕೃಷ್ಣ ಆಶ್ರಮ ಹಾಗೂ ಬಳ್ಳಾರಿಯ ರಾಮಕೃಷ್ಣ ವಿವೇಕಾನಂದ ಕೇಂದ್ರ, ಇವುಗಳ ಸಂಯುಕ್ತ ಆಶ್ರಯದಲ್ಲಿ ನಗರದ ವಿವಿಧ ವಿದ್ಯಾಕೇಂದ್ರಗಳಲ್ಲಿ ಯುವಜನರಿಗೆಂದೇ ಆಯೋಜಿಸಲಾಗಿದ್ದ ಕಾರ್ಯಕ್ರಮಗಳಲ್ಲಿ ವ್ಯಕ್ತಿತ್ವ ವಿಕಸನ ಎಂಬ ಅತ್ಯುತ್ತಮ ಸಿ.ಡಿ. ಪ್ರದರ್ಶನ ಮಾಡಲಾಯಿತು. ಇದು ಮೈಸೂರು ಶ್ರೀರಾಮಕೃಷ್ಣ ಆಶ್ರಮವು ಇಡೀ ದೇಶದ ಯುವ ಜನತೆಗೆ ನೀಡಿರುವ ಅಪೂರ್ವ ಕೊಡುಗೆಯಾಗಿದೆ. ಈಗಾಗಲೆ ೫೦ ಸಾವಿರಕ್ಕೂ ಮೀರಿ ಶಾಲೆಯ ವಿದ್ಯಾರ್ಥಿಗಳು ಇದರ ಪ್ರಯೋಜನ ಪಡೆದುಕೊಂಡಿದ್ದಾರೆ.

ಇದಕ್ಕೂ ಮೊದಲು ಫೆ.೧೧ರಂದು ಬೆಳಗ್ಗೆ ಸ್ವಾಮಿ ವಿವೇಕಾನಂದರ ಭವ್ಯ ಪ್ರತಿಮೆಯನ್ನೊಳಗೊಂಡ ಜ್ಞಾನವಾಹಿನಿಗೆ ಅತ್ಯಂತ ಆದರದ ಸ್ವಾಗತದೊಂದಿಗೆ ಬಳ್ಳಾರಿ ನಗರದ ಮುಖ್ಯ ರಸ್ತೆಗಳಲ್ಲಿ ಅದ್ಭುತ ಮೆರವಣಿಗೆ ನಡೆಸಲಾಯಿತು. ಮೈಸೂರಿನ ಶ್ರೀರಾಮಕೃಷ್ಣ ಆಶ್ರಮದ ಅಧ್ಯಕ್ಷರಾದ ಪೂಜ್ಯ ಸ್ವಾಮಿ ಆತ್ಮವಿದಾನಂದಜಿ ಮಹಾರಾಜ್ ಅವರು ನಗರದ ಇತರ ಗಣ್ಯರೊಂದಿಗೆ ಈ ಮೆರವಣಿಗೆಯಲ್ಲಿ ಭಾಗವಹಿಸಿದ್ದರು.

ಫೆಬ್ರವರಿ ೧೧ರ ಸಂಜೆ ಬಾಲಭಾರತಿ ಶಾಲಾ ಆವರಣದಲ್ಲಿ ಸಾರ್ವಜನಿಕ ಸಭೆ ಏರ್ಪಾಡಾಗಿತ್ತು. ಜಿಲ್ಲಾಧಿಕಾರಿಗಳಾದ ಶ್ರೀ ಜಗದೀಶ್ ಅವರು ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದರು. ಶ್ರೀ ವಿಶ್ವನಾಥ ರೆಡ್ಡಿಯವರು ಸ್ವಾಮಿ ವಿವೇಕಾನಂದರ ವಿಶ್ವ ಮಾನವತೆಯ ಸಂದೇಶವನ್ನು ಹೃದಯಂಗಮವಾಗಿ ವಿವರಿಸಿ ಹೇಳಿದರು.

ಸಾಯಂಕಾಲದ ಸಮಯಗಳಲ್ಲಿ ಶ್ರೀರಾಮಕೃಷ್ಣರ ದೃಷ್ಟಾಂತ ಕಥೆಗಳನ್ನೊಳಗೊಂಡ ಚಿತ್ರಗಳು ಹಾಗೂ ಶ್ರೀಶಾರದಾದೇವಿಯವರ ಜೀವನ ಚರಿತ್ರೆಯ ಚಿತ್ರಗಳನ್ನು ಬಳ್ಳಾರಿಯ ಮಹಾಜನರಿಗೆ ನಗರದ ವಿವಿಧ ಸ್ಥಳಗಳಲ್ಲಿ ಪ್ರದರ್ಶಿಸಲಾಯಿತು. ಫೆಬ್ರವರಿ ೧೨ರಂದು ಬಳ್ಳಾರಿ ಸಮೀಪದ ಸಿರವಾರ ಗ್ರಾಮದಲ್ಲಿ ಚಲನಚಿತ್ರ ಪ್ರದರ್ಶನ ನಡೆಯಿತು. ಒಟ್ಟಿನಲ್ಲಿ ಮೂರು ದಿನಗಳ ಕಾಲ ನಡೆದ ಈ ಕಾರ್ಯಕ್ರಮ ಬಳ್ಳಾರಿ ನಗರ ಹಾಗೂ ಸುತ್ತಮುತ್ತಲಿನ ಜನತೆಗೆ ಜ್ಞಾನಸುಧೆಯನ್ನು ಹರಿಸಿ, ರಸದೌತಣ ನೀಡಿತೆಂದೇ ಹೇಳಬಹುದು.

ಈ ಸಂಚಾರಿ ಅಭಿಯಾನವು ೨೦೦೪ ಡಿಸೆಂಬರ್ ತನಕ ಕರ್ನಾಟಕದ ಇನ್ನೂ ಹಲವು ಜಿಲ್ಲೆಗಳಲ್ಲಿ ಕ್ರಮಿಸುವುದು.

—ಸಂಗ್ರಹ: ಸ್ಥಳೀಯ ಪತ್ರಿಕೆಗಳ ವರದಿಗಳಿಂದ



ಮೆರವಣಿಗೆಯ ಒಂದು ವಿಹಂಗಮ ನೋಟ

◆